## ಅಭಿವೃದ್ಧಿ ಪ್ರಾಧಿಕಾರದ ವಿರೋಧ

ಕನ್ನಡ ಶೀರ್ಷಿಕೆಗಳನ್ನು ಹೊಂದಿಲ್ಲದ ಚಿತ್ರಗಳಿಗೆ ಸರ್ಕಾರದಿಂದ ಸಹಾಯಧನ (ಸಬ್ಸಿಡಿ) ನೀಡುವುದು ಬೇಡವೆಂದು 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ದ ಅಧ್ಯಕ್ಷರಾದ ಎಸ್.ಜಿ. ಸಿದ್ಧರಾಮಯ್ಯನವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ಕನ್ನಡ ಭಾಷೆಯ ಹೊರತಾದ ಶೀರ್ಷಿಕೆಗಳನ್ನು ಬಳಸಿಕೊಳ್ಳುವುದಕ್ಕೆ ನಮ್ಮ ವಿರೋಧವೇನೂ ಇಲ್ಲ. ಆದರೆ, ಅಂಥ ಚಿತ್ರಗಳಿಗೆ ಸರ್ಕಾರದ ಸವಲತ್ತು ದೊರೆಯಬಾರದು ಎನ್ನುವುದು ತಮ್ಮ ಅನಿಸಿಕೆ' ಎಂದು 'ಸುಧಾ' ಜೊತೆ ಮಾತನಾಡಿದ ಸಿದ್ಧರಾಮಯ್ಯ ಹೇಳಿದರು.

ಎಪ್ಪತ್ತು ಎಂಬತ್ತರ ದಶಕದವರೆಗೆ ಕನ್ನಡ ಸಿನಿಮಾಗಳಲ್ಲಿ ಕನ್ನಡಪ್ರಜ್ಞೆಯನ್ನು ಉಳಿಸಿಕೊಳ್ಳಲಾಗಿತ್ತು. ವೈದಿಕ ಚಿಂತನೆಗೆ ಭಿನ್ನವಾದ ಪ್ರತಿನಾಯಕ ಪ್ರಜ್ಞೆ ಕೂಡ ಕನ್ನಡ ಚಿತ್ರರಂಗದಲ್ಲಿ ಕೆಲಸ ಮಾಡಿತ್ತು. ಆದರೆ, ಈಗ ಅಂಥ ಎಚ್ಚರ ಕಾಣಿಸುತ್ತಿಲ್ಲ. 'ರಿಸರ್ವೇಷನ್', 'ಡಿಎನ್ಎ' ರೀತಿಯ ಹೆಸರುಗಳ ಸಿನಿಮಾಗಳು ಬರುತ್ತಿವೆ. ಭಾಷೆಯನ್ನು ಕರಪ್ಟ್ ಮಾಡುವುದರ ಜೊತೆಗೆ ಸಂಸ್ಕೃತಿಯನ್ನು ವಿರೂಪಗೊಳಿಸುವ ಪ್ರಯತ್ನಗಳನ್ನು ನಾವು ವಿರೋಧಿಸಬೇಕಿದೆ ಎನ್ನುವುದು ಅವರ ಸ್ಪಷ್ಟಮಾತು.

ಮಲೆಯಾಳಿತನ ಅಲ್ಲಿನ ಸಿನಿಮಾಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಕಲಾತ್ಮಕ ಚಿತ್ರಗಳು ಮಾತ್ರವಲ್ಲ, ತಾರಾ ವರ್ಚಸ್ಸಿನ ನಟರ ವ್ಯಾಪಾರಿ ಚಿತ್ರಗಳು ಕೂಡ ಕೇರಳ ಸಂಸ್ಕೃತಿಯ ವಕ್ತಾರಿಕೆಯ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತವೆ.

ಈ ಸಂಸ್ಕೃತಿ ರಾಯಭಾರದ ನಿಟ್ಟಿನಲ್ಲಿ ತಮಿಳು ಹಾಗೂ ಮರಾಠಿ ಚಿತ್ರಗಳ ಯಶಸ್ಸು ಕೂಡ ಕಡಿಮೆಯೇನಿಲ್ಲ. ತಮಿಳಿನ ಇತ್ತೀಚಿನ ಕೆಲವು ನಿರ್ದೇಶಕರು ತಮಿಳು ಪ್ರಜ್ಞೆಯ ಜೊತೆಗೆ ದಲಿತ ಪ್ರಜ್ಞೆಯನ್ನೂ ದೃಶ್ಯ ಮಾಧ್ಯಮದಲ್ಲಿ ಅಭಿವ್ಯಕ್ತಿಸುತ್ತಿರುವುದು ಗಮನಾರ್ಹ. ಸ್ವಲ್ಪ ಮಟ್ಟಿಗೆ ತೆಲುಗು ಚಿತ್ರಗಳು ಕೂಡ ತಮ್ಮದೇ ಆದ ಅಸ್ಮಿತೆಯನ್ನು ಹೊಂದಿವೆ. ಸಮಸ್ಯೆ ತೀವ್ರ ಸ್ವರೂಪದಲ್ಲಿ ಇರುವುದು ಕನ್ನಡ ಚಿತ್ರರಂಗದಲ್ಲಿ, ಗಾಂಧಿನಗರದಲ್ಲಿ! ಇಲ್ಲಿ ಶೀರ್ಷಿಕೆಯ ಪೋಷಾಕಿನ ಜೊತೆಗೆ ಹೂರಣದ ರೂಪದಲ್ಲಿನ ಆತ್ಮಕ್ಕೂ ಕಂಗ್ಲಿಷ್‌ನ ಸೋಂಕು ತಗುಲಿದೆ. ಕಂಗ್ಲಿಷ್ ಎಂದರೆ ಇಂಗ್ಲಿಷ್‌ನ ಕಲಬೆರಕೆ ಎಂದಷ್ಟೇ ಭಾವಿಸಬೇಕಿಲ್ಲ. ತನ್ನತನ ಕಳೆದುಕೊಂಡ ಅತಂತ್ರ ಪರಿಸ್ಥಿತಿಯ ರೂಪಕ ಈ ಕಂಗ್ಲಿಷ್!

ಜನಪ್ರಿಯ ಗೀತೆಗಳನ್ನು ಕೂಡ ಸಿನಿಮಾಗಳಲ್ಲಿ ಕನ್ನಡತನದ ಉದಾಹರಣೆಗಳಾಗಿ ನೋಡಲಿಕ್ಕೆ ಸಾಧ್ಯವಿದೆ. ಗಣೇಶೋತ್ಸವ, ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿನ ಆರ್ಕೆಸ್ಟ್ರಾಗಳನ್ನು ಗಮನಿಸಿದರೆ, ಅಲ್ಲಿನ ಎಲ್ಲ ಗೋಷ್ಠಿಗಳಲ್ಲೂ ಒಂದಷ್ಟು ಕಾಯಂ ಗೀತೆಗಳು ಸಾಮಾನ್ಯವಾಗಿ ಇರುತ್ತವೆ. 'ಸತ್ಯ ಹರಿಶ್ಚಂದ್ರ' ಸಿನಿಮಾದ 'ಕುಲದಲ್ಲಿ ಮೇಲ್ಯಾವುದೋ ಹುಚ್ಚಪ್ಪ ಕುಲದಲ್ಲಿ ಕೀಳ್ಯಾವುದೋ' ಎನ್ನುವ ವೀರಬಾಹುವಿನ ಕುಣಿತದ ಗೀತೆ, 'ಆಕಸ್ಮಿಕ' ಚಿತ್ರದ 'ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು' ಎನ್ನುವ ರಾಜಗೀತೆ, 'ವಿಜಯನಗರ ವೀರಪುತ್ರ'ದ 'ಅಪಾರ ಕೀರ್ತಿ ಗಳಿಸಿ ಮೆರೆದ ನಾಡಿದು' ಎನ್ನುವ ಅಭಿಮಾನದ ಹಾಡು – ಹೀಗೆ, ಎಲ್ಲ ಕಾಲಕ್ಕೂ ಸಲ್ಲುವ ಚಿತ್ರಗೀತೆಗಳು ಇದ್ದೇ ಇರುತ್ತವೆ. ಈ ಹಾಡುಗಳ ಜೊತೆಗೆ, ಆಯಾ ಕಾಲದ ಜನಪ್ರಿಯ ಗೀತೆಗಳು ಹಾಗೂ ಕನ್ನಡ ನಾಡು–ನುಡಿ ಸ್ತುತಿಗೀತೆಗಳು ಹೊಸತಾಗಿ ಸೇರಿಕೊಳ್ಳುತ್ತಿರುತ್ತವೆ. ಆದರೆ, ಈಚಿನ ದಿನಗಳ ಆರ್ಕೆಸ್ಟ್ರಾಗಳಲ್ಲಿ, ಹೊಸದಾಗಿ ಸೇರಿಕೊಳ್ಳುವ ಕನ್ನಡ ಸ್ತುತಿಗೀತೆಗಳ ಸಂಖ್ಯೆ ಕಡಿಮೆಯಾಗುತ್ತಿದೆ! ಏಕೆಂದರೆ, ಅಂಥ ಗೀತೆಗಳು ಇವತ್ತಿನ ಸಿನಿಮಾಗಳಲ್ಲಿ ಕಡಿಮೆಯಾಗುತ್ತಿವೆ. ಹಿಂದೆಲ್ಲ ಕನ್ನಡವನ್ನು ಬಣ್ಣಿಸುವ ಮೂಲಕ ನಾಯಕನ ವರ್ಚಸ್ಸನ್ನು ಎತ್ತಿಹಿಡಿಯುವ ಪ್ರಯತ್ನಗಳು ನಡೆಯುತ್ತಿದ್ದವು. ಈಗ ಕನ್ನಡವನ್ನು ಬದಿಗೆ ಸರಿಸಿ, ನೇರವಾಗಿ ನಾಯಕನನ್ನೇ ವಿಜೃಂಭಿಸಲಾಗುತ್ತಿದೆ.

ಕನ್ನಡ ಸ್ತುತಿಗೀತೆಗಳ ಹಿನ್ನೆಲೆಯಲ್ಲಷ್ಟೇ, ಸಿನಿಮಾಗಳಲ್ಲಿ 'ಕನ್ನಡತನ' ಕ್ಷೀಣಿಸುತ್ತಿದೆ ಎನ್ನುವುದು ಬೀಸು ಹೇಳಿಕೆಯಾಗುತ್ತದೆ. ಈ ನಿಟ್ಟಿನಲ್ಲಿ, ಸಿನಿಮಾದ ಒಟ್ಟಾರೆ ಸ್ವರೂಪ ಹಾಗೂ ಆಶಯಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

### ಪರಂಪರೆಯ ಒರತೆ - ಬದ್ಧತೆಯ ಕೊರತೆ

ಸಿನಿಮಾ ಎನ್ನುವುದು ಒಂದು ಉತ್ಪನ್ನವೂ ಹೌದು, ಅದು ಸೃಜನಶೀಲ ಅನುಸಂಧಾನವೂ ಹೌದು. ಆದರೆ, ಇಂದಿನ ಕನ್ನಡ ಸಿನಿಮಾಗಳಲ್ಲಿ ಕಲೆಯ ಸ್ವರೂಪ ಕ್ಷೀಣಿಸುತ್ತಾ ವ್ಯಾಪಾರಿ ಅಂಶಗಳೇ ಮುನ್ನೆಲೆಗೆ ಬರುತ್ತಿವೆ. ಯಾಕೆ ಹೀಗಾಗುತ್ತದೆ? ಇದಕ್ಕೆ ಯುವ ತಲೆಮಾರಿನ ಚಿತ್ರ ನಿರ್ಮಾತೃಗಳಲ್ಲಿನ ಕನ್ನಡ ಬದ್ಧತೆಯ ಕೊರತೆ ಕಾರಣವೇ? ಈ ಪ್ರಶ್ನೆಗೆ ಉತ್ತರ ಹುಡುಕುವ ರೂಪದಲ್ಲಿ ಎಂಟು ದಶಕಗಳಿಗೂ ಹೆಚ್ಚು ಇತಿಹಾಸ ಹೊಂದಿರುವ ಕನ್ನಡ ಸಿನಿಮಾ ಪರಂಪರೆಯ ಕೆಲವು ಚಾರಿತ್ರಿಕ ಸಂಗತಿಗಳನ್ನು ನೆನಪಿಸಿಕೊಳ್ಳಬೇಕು.

ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ'. 1934ರಲ್ಲಿ ತೆರೆಕಂಡ ಈ ಚಿತ್ರದ ಹಿನ್ನೆಲೆಯಲ್ಲಿ ಪ್ರಮುಖವಾಗಿ ನೆನಪಿಸಿಕೊಳ್ಳಬೇಕಾದ ಹೆಸರು ಆರ್.

ಒಲವೇ ಮಂದಾರ... ಒಂದು ವಿಭಿನ್ನ ಪ್ರಯೋಗ

